## ಉತ್ತರ

ಅ. ಬೀದರ್ ಜಿಲ್ಲೆಯ ಔರಾದ್ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಗನ್ನು 30 ಹಾಸಿಗೆಗಳಿಂದ 50 ಹಾಸಿಗೆಗಳ ಆಸ್ಪತ್ರೆಯಾಗಿ ವಿಸ್ತರಿಸುವ ಕಾಮಗಾರಿಯನ್ನು ಕೆಎಫ್‌ಡಬ್ಲ್ಯೂ ನೆರವಿನ ಯೋಜನೆಯಡಿ ಸೇರಿಸಲಾಗಿದೆ.

ಆ. ರಾಷ್ಟ್ರೀಯ ಸ್ಪರ್ಧಾತ್ಮಕ ಗುತ್ತಿಗೆಯ ಆಧಾರದ ಮೇಲೆ ಈ ಕಾಮಗಾರಿಯನ್ನು ಶ್ರೀ ಡಿ.ಜೆ.ಪ್ರಕಾಶ್ ರಾವ್, ವಿಜಯವಾಡ ಇವರಿಗೆ ರೂ.126.88 ಲಕ್ಷಗಳ ಗುತ್ತಿಗೆ ಮೊತ್ತಕ್ಕೆ ವಹಿಸಲಾಗಿದೆ. ಈ ಕಾಮಗಾರಿಗೆ ರೂ.117.00 ಲಕ್ಷಗಳ ಅಂದಾಜು ಮಂಜೂರಾಗಿದ್ದು ಇದುವರೆವಿಗೂ ರೂ.114.71 ಲಕ್ಷಗಳು ವೆಚ್ಚವಾಗಿದೆ.

ಇ. ಆಸ್ಪತ್ರೆ, ವಸತಿಗೃಹಗಳು ಮತ್ತು ಇತರೆ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಈ ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ದಿನಾಂಕ: 17.9.2001ಕ್ಕೆ ಪೂರ್ಣಗೊಳಿಸಬೇಕಾಗಿದ್ದು ಫೆಬ್ರವರಿ 2002ರ ಅಂತ್ಯಕ್ಕೆ ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲಾಗುವುದು. ಈ ಕಾಮಗಾರಿ ಪೂರ್ಣಗೊಳಿಸಲು ಹೆಚ್ಚುವರಿ ಕೆಲಸಗಳೂ ಸೇರಿ ಒಟ್ಟಾರೆ ರೂ.140.00 ಲಕ್ಷಗಳ ವೆಚ್ಚವಾಗುವ ನಿರೀಕ್ಷೆಯಿದೆ.

ಔರಾದ್‌ನಲ್ಲಿ ಮುಕ್ತ ವಿಶ್ವವಿದ್ಯಾನಿಲಯ ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 218(679)

**ಸದಸ್ಯರ ಹೆಸರು: ಶ್ರೀ ಗುಂಡಪ್ಪ ವಕೀಲ್(ಔರಾದ್)**

**ಉತ್ತರಿಸುವ ಸಚಿವರು: ಡಾ॥ಜಿ.ಪರಮೇಶ್ವರ್(ಉನ್ನತ ಶಿಕ್ಷಣ ಸಚಿವರು)**

## ಪ್ರಶ್ನೆ

ಅ) ಬೀದರ್ ಜಿಲ್ಲೆಯ, ಔರಾದ್ ಪಟ್ಟಣದಲ್ಲಿ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಈ ಬೇಡಿಕೆಯು ಈ ಭಾಗದಲ್ಲಿ ಎಷ್ಟು ವರ್ಷದಿಂದ ಇದೆ?

ಇ) ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಕೈಗೊಂಡಿರುವ ಕ್ರಮಗಳೇನು? ಈ

ನಿಟ್ಟಿನಲ್ಲಿ ಕೆಲಸ ಪ್ರಗತಿಯಲ್ಲಿದೆಯೇ?

**ಉತ್ತರ**

ಅ) ಇಲ್ಲ.

ಆ) ಯಾವುದೇ ಬೇಡಿಕೆಗಳು ಇಲ್ಲ.

ಇ) ಆನ್ವಯಿಸುವುದಿಲ್ಲ.

ಔರಾದ್ ತಾಲ್ಲೂಕು ಪಂಚಾಯ್ತಿ ಸಭೆಯ ಸಂಪೂರ್ಣ ಗ್ರಾಮೀಣ ಅಭಿವೃದ್ಧಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 219(681)

**ಸದಸ್ಯರ ಹೆಸರು: ಶ್ರೀ ಗುಂಡಪ್ಪ ವಕೀಲ(ಔರಾದ್)**

**ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)**

**ಪ್ರಶ್ನೆ**

ಅ) ಔರಾದ್ ತಾಲ್ಲೂಕು ಪಂಚಾಯತಿ ಸಭೆಯು ಸಂಪೂರ್ಣ ಗ್ರಾಮೀಣ ಸಮೃದ್ಧಿ ಯೋಜನೆಯಡಿಯಲ್ಲಿ ಎಷ್ಟು ಮೊತ್ತಕ್ಕಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ನಡವಳಿ ಅನುಮೋದಿಸಿದೆ.

ಆ) ಇಂತಹ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಯಾವ ಯಾವ ಕ್ಷೇತ್ರಗಳನ್ನು ಹಾಗೂ ಎಷ್ಟು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ?

ಇ) ಕ್ರಿಯಾ ಯೋಜನೆ ಅನುಷ್ಠಾನದಲ್ಲಿ ತಾರತಮ್ಯ ಅನುಸರಿಸಿ ಮಲತಾಯಿ ಧೋರಣೆ ತಾಳಲಾಗಿದೆ ಎಂಬ ಆರೋಪದ ಬಗ್ಗೆ ಸರ್ಕಾರದ ನಿಲುವೇನು?

ಈ) ಈ ಯೋಜನೆಯಡಿ ಕ್ರಿಯಾ ಯೋಜನೆ ಕೈಗೆತ್ತಿಕೊಳ್ಳಲು ಸದರಿ ಸಭೆಯು ಮಲತಾಯಿ ಧೋರಣೆ ತೀರ್ಮಾನವನ್ನು ತೆಗೆದುಕೊಂಡು ಸರ್ವಾನುಮತದ ನಡವಳಿಯನ್ನು ಬಹುಮತದಿಂದ ಅಂಗೀಕರಿಸಿದೆ ಎಂಬ ಸಂಗತಿ ನಿಜವೇ?